ಸಾಕ್ಷಿಯನ್ನು ದಿನಾಂಕಃ 07/01/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- 3 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು 2 ನೇ ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಭಾಷೆ ಓದಲು ಬರೆಯಲು ಬರುತ್ತದೆ. ನನ್ನ ಹುಟ್ಟಿದ ದಿನಾಂಕ ನನಗೆ ನೆನಪಿಲ್ಲ. ನನ್ನ ಮದುವೆಯು 23-24 ವರ್ಷ ವಯಸ್ಸಿನಲ್ಲಿ ಆಗಿರುತ್ತದೆ. ನನ್ನ ತಂದೆ ತಾಯಿಯ ಊರು ರಾಣೆಬೆನ್ನೂರು ತಾಲೂಕ ಗೂಡಗೂರು ಇರುತ್ತದೆ. ನಿಮ್ಮ ಮದುವೆ ಹಿರಿಯರು ನಿಶ್ಚಯ ಮಾಡಿಸಿದ ಮದುವೆ ಎಂದರೆ ಸರಿ. ಸೋಮರೆಡ್ಡಿ ಯವರ ಮನೆತನ ಒಳ್ಳೆಯ ಸುಂಸ್ಕೃತ ಮನೆತನ ಮತ್ತು ಶ್ರೀಮಂತ ಮನೆತನ ಎಂದು ನಿಮಗೆ ಅಲ್ಲಿ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಮದುವೆಯಾದ ನಂತರ ನಿಮ್ಮ ಗಂಡ ನಿಮಗೆ ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ, ಮದುವೆಯಾದ ಮೇಲೆ ನನಗೆ ಗೊತ್ತಾಯಿತು, ಅವರು ಹೀಗೆ ಇದ್ದಾರೆ ಎಂದು. ನಿಮ್ಮ ಮನೆಯ ಮನೆತನ ನಿಮ್ಮ ಯಜಮಾನರು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಪ್ರಾರಂಭದಲ್ಲಿ ಅವರು ನೋಡಿಕೊಳ್ಳುತ್ತಿದ್ದರು, ಸಾಕ್ಷಿ ಮುಂದುವರೆದು ಅವರು ತುಂಬಾ ಕುಡಿತದ ಚಟಕ್ಕೆ ಒಳಗಾದರು ಎಂದು ಹೇಳುತ್ತಾರೆ. ಮದುವೆಯಾದ ಒಂದು ವರೆ ವರ್ಷಕ್ಕೆ 1 ನೇ ಪ್ರತಿವಾದಿ ಕುಡಿತದ ಚಟಕ್ಕೆ ಒಳಗಾಗಿದ್ದಾರೆ ಎಂದು ಗೊತ್ತಾಗಿರುತ್ತದೆ. ನನಗೆ ಒಬ್ಬನೆ ಮಗ. 2 ನೇ ವಾದಿ 2012 ರಲ್ಲಿ ಹುಟ್ಟಿರುತ್ತಾನೆ. ಈಗ 7 ನೇ ತರಗತಿಯಲ್ಲಿ ಓದುತ್ತಿದ್ದಾನೆ. ನನ್ನ ಮಗನ ಅಂದರೆ 2 ನೇ ವಾದಿಯ ಹುಟ್ಟಿದ ದಿನಾಂಕಃ 24/06/2012. 1 ನೇ ಪ್ರತಿವಾದಿ ನಿಮ್ಮನ್ನು ಮದುವೆಯಾದ ದಿನದಿಂದ ನಿಮ್ಮ ಜೊತೆ ಸಂಸಾರ ಮಾಡಿದ್ದಾರೆ ಎಂದರೆ ಸರಿ. ನೀವು ಮತ್ತು 1 ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿ 1 ನೇ ಪ್ರತಿವಾದಿ 3 ವರ್ಷದಿಂದ ಮನೆಗೆ ಬಂದಿಲ್ಲ, ಒಂದು ದಿನ ಮನೆಗೆ ಬಂದು ಹೋಗುತ್ತಾರೆ ಎಂದು ಹೇಳುತ್ತಾರೆ. ನಾನು ಈಗ ಹರ್ಶಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಹರ್ಶಿಯಲ್ಲಿರುವ ಮನೆ ನಂಬರ ನನಗೆ ಹೇಳಲು

ಬರುವುದಿಲ್ಲ. ಸದರಿ ಮನೆಯು ನನ್ನ ಸ್ವಂತ ಮನೆ. ಸದರಿ ನಾನು ವಾಸಿಸುವ ಮನೆಯು ನನ್ನ ಗಂಡನ ಅಪ್ಪನಿಂದ ಬಂದಿರುವ ಮನೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಗೆ ಯಾವುದೇ ನೌಕರಿ ಇಲ್ಲ, ಅವರು ಒಕ್ಕಲುತನ ಮಾಡುತ್ತಾರೆ ಎಂದರೆ ಸರಿ. ಈ ದಾವಾ ಆಸ್ತಿಗಳನ್ನು ಹೊರತು ಪಡಿಸಿ, ಬೇರೆ ಜಮೀನುಗಳು ಹರ್ತಿ ಗ್ರಾಮದಲ್ಲಿ ಇದ್ದಾವೆ ಎಂದರೆ ಇಲ್ಲ ಎಂದು ಹೇಳುತ್ತಾರೆ. ಹರ್ತಿ ಗ್ರಾಮದಲ್ಲಿ ಬೇರೆ ಜಮೀನು ಇದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಇವತ್ತು ನಿಮ್ಮ ಗಂಡ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸಾಕ್ಷಿ ಇಲ್ಲ, ನಾನೊಬ್ಬಳೇ ಬಂದಿದ್ದೇನೆಂದು ಹೇಳುತ್ತಾರೆ. ಕೇಸು ಹಾಕಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ದಾವಾ ಆಸ್ತಿ ಯಾವ ಗ್ರಾಮದ್ದು, ಯಾವ ತಾಲೂಕು, ಯಾವ ಜಿಲ್ಲಾದ್ದು ಎಂದು ನನ್ನ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ನಿಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿಗೆ ಚೆಕ್ಕುಬಂದಿ ಬರೆದಿಲ್ಲ ಎಂದರೆ ಸರಿ. ದಾವಾ ಆಸ್ತಿ ಯಾವ ಗ್ರಾಮದ್ದು, ಯಾವ ತಾಲೂಕು, ಯಾವ ಜಿಲ್ಲಾದ್ದು ಎಂದು ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ನಿಮಗೆ ದಾವೆಯ ಬಗ್ಗೆ ಮತ್ತು ಅದರಲ್ಲಿರುವ ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಮಾಹಿತಿ ಇದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯಿಂದ ಹೆಚ್ಚಿನ ಹಣ ಪಡೆದುಕೊಳ್ಳಲು ನಿಮ್ಮ ಗಂಡನ ಮಾತು ಕೇಳಿಕೊಂಡು ಸುಳ್ಳು ದಾವೆ ಹಾಕಿದ್ದೀರಿ ಎಂದರೆ ಸರಿಯಲ್ಲ.

ನನ್ನ ಮಾವನ ಹೆಸರು ಬಸವರಡ್ಡಿ ಯಲ್ಲಪ್ಪ ಸೋಮರೆಡ್ಡಿ. 2 ನೇ ಪ್ರತಿವಾದಿ ಚಿನ್ನವ್ವ ನನ್ನ ಅತ್ತೆ. ಇವರಿಗೆ 5 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಎಂದರೆ ಸರಿ. ಅವರು ಹೆಸರುಗಳು 1) ಮಲ್ಲಿಕಾರ್ಜುನರೆಡ್ಡಿ, 2) ವೆಂಕರೆಡ್ಡಿ, 3) ಗೋವಿಂದರೆಡ್ಡಿ, 4) ಮೋಹನರೆಡ್ಡಿ ಮತ್ತು 5) ಎಲ್ ರೆಡ್ಡಿ ಮತ್ತು ಒಬ್ಬ ಹೆಣ್ಣು ಮಗಳು ವೃಂದಾ ಎಂದರೆ ಸರಿ. ಮಲ್ಲಿಕಾರ್ಜುನರೆಡ್ಡಿ ಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿಮ್ಮ ಮಾವನ ಹೆಸರಿನಲ್ಲಿ ಸರ್ವೇ ನಂ.95/1 ಕ್ಷೇತ್ರ 17 ಎಕರೆ 39

ಗುಂಟೆ ಹರ್ತಿ ಗ್ರಾಮದಲ್ಲಿ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ನಿಮ್ಮ ಮಾವನವರಿಗೆ ಅವರ ತಂದೆಯಿಂದ ಬಂದ ಆಸ್ತಿ ಎಂದರೆ ಸರಿ. ಅದೇ ರೀತಿ ಸರ್ವೇ ನಂ.49/1 ಕ್ಷೇತ್ರ 7 ಎಕರೆ 16 ಗುಂಟೆ ಹರ್ತಿ ಗ್ರಾಮದಲ್ಲಿ ಜಮೀನು ನನ್ನ ಮಾವನಿಗೆ ಪಾಲಿನಲ್ಲಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಮಾವನವರು 1986 ರಲ್ಲಿ 5 ಜನ ಗಂಡು ಮಕ್ಕಳ ನಡುವೆ ಪಾಲು ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲುವಾಟ್ನಿಯಲ್ಲಿ ಮಲ್ಲಿಕಾರ್ಜುನರೆಡ್ಡಿವರಿಗೆ 4 ಎಕರೆ 10 ಗುಂಟೆ ಜಮೀನು ಬಂದಿದೆ ಎಂದರೆ ಸರಿ. ಗೋವಿಂದರೆಡ್ಡಿಗೆ 4 ಎಕರೆ 19 ಗುಂಟೆ ಜಮೀನು ಬಂದಿದೆ. ಉಳಿದ ಎಲ್ಲಾ ಸಹೋದರರಿಗೆ ತಲಾ 4 ಎಕರೆ 10 ಗುಂಟೆ ಜಮೀನು ಬಂದಿದೆ ಎಂದರೆ ಸರಿ. 1986 ರ ವಾಟ್ನಿ ಪ್ರಕಾರ ನಿಮ್ಮ ಗಂಡನಿಗೆ 5 ಎಕರೆ ಜಮೀನು ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯ ಗೊತ್ತಿದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಂದೆ ಮಕ್ಕಳ ನಡುವೆ ಹಿಸ್ಸೆ ಆದ ಪ್ರಕಾರ ದಿಃ 23/05/1986 ರ ಡ ಉತಾರ ನಂ.4734 ಪ್ರಕಾರ ತಮ್ಮ ತಮ್ಮ ಹಿಸ್ಸೆಯ ಜಮೀನನ್ನು ಹೊಂದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಡ ಉತಾರ ತೋರಿಸಲಾಗಿ ಅದರಲ್ಲಿ ನಿಮ್ಮ ಗಂಡನಿಗೆ 5 ಎಕರೆ ಜಮೀನು ಬಂದಿದೆ ಎಂದು ಕೇಳಲಾಗಿ, ಅದನ್ನು ಒಪ್ಪಿದ್ದರಿಂದ ಅದನ್ನು ನಿಡಿಃ 1 ಎಂದು ಗುರುತಿಸಲಾಯಿತು. ಸರ್ವೇ ನಂ.95 ಕ್ಷೇತ್ರ 17 ಎಕರೆ 39 ಗುಂಟೆಯಲ್ಲಿ 4 ಹಿಸ್ಸೆಯಾಗಿ 95/1, 95/2, 95/3, ಮತ್ತು 95/4 ಎಂದು ಹಿಸ್ಸೆಯಾಗಿ ಒಡೆದಾಗಿದೆ ಎಂದರೆ ಸರಿ. ನಿಮ್ಮ ಗಂಡನಿಗೆ 5 ಎಕರೆ ಜಮೀನು ವಾಟ್ನಿಯಲ್ಲಿ ಬಂದಿರುವುದರಿಂದ ಅದು ಅವರ ಸ್ವಂತ ಆಸ್ತಿ ಎಂದರೆ ಅದು ನನಗೆ ಗೊತ್ತಿಲ್ಲ. ವಾಟ್ನಿ ಪ್ರಕಾರ ಅಣ್ಣ ತಮ್ಮಂದಿರು ತಮ್ಮ ತಮ್ಮ ಹಿಸ್ಸೆಯ ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸರಿ. ವಾಟ್ನಿಯ ಪ್ರಕಾರ ಅವರವರ ತಮ್ಮ ಆಸ್ತಿಯ ಮಾಲೀಕರು ಮತ್ತು ಕಬ್ಜೆದಾರರು ಎಂದರೆ ಸರಿ. ಅದೇ ರೀತಿ ಪ್ರತಿವಾದಿ 2(ಎ), 2(ಬಿ) ಮತ್ತು 2(ಡಿ) ತಮ್ಮ ತಮ್ಮ ಪಾಲಿನ ಆಸ್ತಿಯನ್ನು ಅನುಭವಿಸುತ್ತಾ ಬಂದಿದ್ದಾರೆ ಎಂದರೆ ಸರಿ. ನಿಮ್ಮ ಗಂಡನ ಹಿಸ್ಸೆಯಲ್ಲಿ ಅವರಿಗೆ ಯಾವುದೇ ಪಾಲು ಇಲ್ಲ ಎಂದರೆ ಸಾಕ್ಷಿ

ಅವರಿಗೆ ಪಾಲು ಇದೆ ಎಂದು ಹೇಳುತ್ತಾರೆ. ಅವರವರ ಪಾಲಿಗೆ ಬಂದ ಹೊಲದಲ್ಲಿ ಅವರವರೆ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಹೊಲವನ್ನು ಸಹ ಅವರೇ ಮಾಡುತ್ತಾರೆ ಎಂದು ಹೇಳುತ್ತಾರೆ.

ನಿಮ್ಮ ಗಂಡನಿಗೆ ಬಂದ 5 ಎಕರೆಯಲ್ಲಿ 2 ಹಿಸ್ಸೆಯಾಗಿ ಆಗಿವೆ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿ 2 ಎಕರೆ 37 ಗುಂಟೆ ಮಾತ್ರ ನನ್ನ ಗಂಡನಿಗೆ ಇದೆ ಎಂದು ಹೇಳುತ್ತಾರೆ. ನಿಮ್ಮ ಗಂಡನಿಗೆ ಬಂದ ಪಾಲಿನ 5 ಎಕರೆಯಲ್ಲಿ 2 ಹಿಸ್ಸೆ ಒಡೆದು, ಅದು 95/4 ಅ ಮತ್ತು 95/4 ಬ ಎಂದು ಆಗಿದೆ, ಅದರಲ್ಲಿ ನಿಮ್ಮ ಗಂಡನಿಗೆ ಸೇರಿದ್ದು 95/4 ಬ ಎಂದು ಹೇಳುತ್ತಾರೆ. ನಿಮ್ಮ ಗಂಡ ಅಂದರೆ 1 ನೇ ಪ್ರತಿವಾದಿ ತನಗೆ ಬಂದ ಪಾಲಿನ ಆಸ್ತಿಯಲ್ಲಿ 2 ಎಕರೆ 37 ಗುಂಟೆ ದಿಃ 11/05/2007 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಸದರಿ ಖರೀದಿ ಪತ್ರ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿಃ 2 ಎಂದು ಗುರುತಿಸಲಾಯಿತು. ಸಾಕ್ಷಿ ಅದರಲ್ಲಿರುವ ತನ್ನ ಗಂಡನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿಃ 2(ಎ) ಎಂದು ಗುರುತಿಸಲಾಯಿತು. ಸದರಿ ಆಸ್ತಿಯನ್ನು ರೂ.3,65,625/- ಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಮನೆತನದ ಅಡಚಣೆಗಾಗಿ ಮಾರಾಟ ಮಾಡುತ್ತಿದ್ದೇನೆಂದು ನಿಮ್ಮ ಮನೆಯವರು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಬಗ್ಗೆ ನೀವಾಗಲಿ ನಿಮ್ಮ ಮಗನಾಗಲಿ ಇಲ್ಲಿಯವರೆಗೆ ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿ. ಸದರಿ ಆಸ್ತಿ ಖರೀದಿ ಆದ ನಂತರ ಖರೀದಿ ಮಾಡಿಕೊಂಡವರ ಕಬ್ಜಾ ವಹಿವಾಟಿನಲ್ಲಿ ಇದೆ ಎಂದರೆ ಸರಿ. ಸದರಿಯವರಿಗೆ ಖರೀದಿ ಕೊಟ್ಟ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಮತ್ತು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಬಗ್ಗೆ ಉಳಿದ ಪ್ರತಿವಾದಿಗಳು ಇಲ್ಲಿಯವರೆಗೆ ಯಾವುದೇ ದಾವೆ ಮತ್ತು ತಕರಾರು ಮಾಡಿಲ್ಲ ಎಂದರೆ ಸರಿ.

ಸರ್ವೇ ನಂ.95/5 ಜಮೀನಿನ ಮೇಲೆ ನಿಮ್ಮ ಗಂಡ ಗ್ರಾಮೀಣ ಬ್ಯಾಂಕನಲ್ಲಿ ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 15/02/2000 ರಲ್ಲಿ 1 ನೇ ಪ್ರತಿವಾದಿ ರೆಡ್ಡಿ ಬ್ಯಾಂಕನಲ್ಲಿ ಸಾಲ ಮಾಡಿದ್ದರು ಎಂದರೆ ಸರಿ. ಮಲಪ್ರಭಾ ಗ್ರಾಮೀಣ ಬ್ಯಾಂಕನಲ್ಲಿ 1 ನೇ ಪ್ರತಿವಾದಿ ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಗಂಡ ಮನೆತನದ ಅಡಚಣೆಗಾಗಿ ಈ ಮೇಲೆ ಹೇಳಿದ ಬ್ಯಾಂಕಿನಲ್ಲಿ ಸಾಲ ಮಾಡಿದ್ದಾರೆ ಎಂದರೆ ಸರಿ. ನಿಮ್ಮ ಗಂಡ ಸಾಲ ಮಾಡಿದ್ದರಿಂದ ಸದರಿ ಬೋಜಾವನ್ನು ಪಹಣಿಯಲ್ಲಿ ತೋರಿಸಿದ್ದಾರೆ ಎಂದರೆ ಇರಬಹುದು ಎಂದು ಹೇಳುತ್ತಾರೆ.

**ಮುಂದಿನ ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು, ಆಲಿಸಿ ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
07.01.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**